**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ: 16.02.2024.**

**ಪಾಟೀ ಸವಾಲು - ಡಿಕ್ರಿದಾರರ ಪರ ವಕೀಲರಿಂದಃ**

4) ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನಗೆ ಈ ದಾವಾ / ಅರ್ಜಿಯಲ್ಲಿ ನಡೆದಿರುವ ಸಂಗತಿಗಳ ಬಗ್ಗೆ ಗೊತ್ತು ಎಂದು ಬರೆಯಿಸಿದ್ದು, ಈ ದಾವೆ ಮತ್ತು ಅರ್ಜಿಯಲ್ಲಿ ಏನೇನು ನಡೆದಿದೆ ಹೇಳಿ ಎಂದರೆ ನನಗೆ 15 ಗುಂಟೆ ಮಾರಾಟ ಮಾಡಿದ್ದಾರೆ ಎಂಬುದನ್ನು ಬಿಟ್ಟು ಉಳಿದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಜಮೀನು ಫಾತೀಮಾ ರವರ ಗಂಡ ಸಯ್ಯದ್ ಇಬ್ರಾಹಿಂ ರವರಿಗೆ ವಿಭಾಗ ಪತ್ರದ ಮೂಲಕ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸಯ್ಯದ್ ಇಬ್ರಾಹಿಂ ಮೃತಪಟ್ಟ ನಂತರ ಅವರಿಗೆ ಇಬ್ಬರು ವಾರಸುದಾರರು ಇದ್ದರು, ಅವರ ಹೆಸರುಗಳು ಸರ್ದಾರ್ ಮತ್ತು ಅಮೀರ್ ಜಾನ್ ಇರುತ್ತವೆ. ಸಯ್ಯದ್ ಇಬ್ರಾಹಿಂ ಮೃತಪಟ್ಟ ನಂತರ ಸರ್ವೆ ನಂ.35/2 ರಲ್ಲಿ 1 ಎಕರೆ 18 ಗುಂಟೆ ಜಮೀನು ಅಮೀರ್ ಜಾನ್ ಹೆಸರಿಗೆ ಖಾತೆಯಾಗಿತ್ತು ಎಂದರೆ ಸರಿಯಲ್ಲ. ಸಯ್ಯದ್ ಇಬ್ರಾಹಿಂ ತೀರಿಕೊಂಡ ನಂತರ ಖಾತೆ ಯಾರ ಹೆಸರಿಗೆ ಆಗಿತ್ತು ಎಂದರೆ ಸರ್ದಾರ್ ಗೆ 15 ಗುಂಟೆ ಮತ್ತು ಅಮೀರ್ ಜಾನ್ ಗೆ ಮಿಕ್ಕ ಜಮೀನಿನ ಖಾತೆಯಾಗಿತ್ತು. ಅಣ್ಣ-ತಮ್ಮಂದಿರ ನಡುವೆ 1995 ರಲ್ಲಿ ನಡೆದಿದ್ದ ವಿಭಾಗದ ಮೂಲಕ ಸರ್ದಾರ್ ಗೆ 15 ಗುಂಟೆ ಖಾತೆಯಾಗಿತ್ತು. ನಾನು ಸದರಿ ವಿಭಾಗ ಪತ್ರವನ್ನು ನೋಡಿದ್ದುಂಟೇ? ಎಂದರೆ ನಾನು ವಿಭಾಗ ಪತ್ರವನ್ನು ನಮ್ಮ ವಕೀಲರಿಗೆ ತೋರಿಸಿದ್ದು, ಅವರು ಸರ್ದಾರ್ ಹೆಸರಿಗೆ ಬಂದಿರುವ 15 ಗುಂಟೆ ಖರೀದಿ ಮಾಡಬಹುದು ಎಂದು ಹೇಳಿದ್ದರಿಂದಲೇ ಖರೀದಿ ಮಾಡಿದ್ದೇನೆ. ಸದರಿ ವಿಭಾಗ ಪತ್ರವನ್ನು ನಾನು ಹಾಜರು ಮಾಡಿಲ್ಲ ಎಂದರೆ ಮಾಡಿದ್ದೇನೆ. ನಾನು ಸರ್ದಾರ್ ರವರು ನನಗೆ 15 ಗುಂಟೆಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಿರುವ ಕ್ರಯಪತ್ರವನ್ನು ಕೂಡ ಹಾಜರು ಮಾಡಿಲ್ಲ ಎಂದರೆ ಮಾಡಿದ್ದೇನೆ.

5) ನಾನು ನನಗೆ 15 ಗುಂಟೆ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಿರುವ ಸರ್ದಾರ್ ಚಿಕ್ಕಬಳ್ಳಾಪುರದ ವಾಸಿಯಾಗಿದ್ದು, ಅವರ ತಂದೆಯ ಹೆಸರು

ಮಸ್ತಾನ್ ಸಾಬ್ ಮತ್ತು ತಾಯಿಯ ಹೆಸರು ಹುಸೇನ್ ಬೀ ಎಂದರೆ ಇಲ್ಲ, ಸರ್ದಾರ್ ರವರ ತಂದೆಯ ಹೆಸರು ಸಯ್ಯದ್ ಇಬ್ರಾಹಿಂ ಇರುತ್ತದೆ. ನನಗೆ ಮಾರಾಟ ಮಾಡಿರುವ ವ್ಯಕ್ತಿ ಸರ್ದಾರ್, ಸಯ್ಯದ್ ಇಬ್ರಾಹಿಂ ಮತ್ತು ಫಾತೀಮಾ ರವರ ಮಗನೆಂದು ದೃಢಪಡಿಸುವ ದಾಖಲೆಗಳನ್ನು ನಾನು ಹಾಜರು ಮಾಡಿದ್ದುಂಟೇ? ಎಂದರೆ ಮಾಡಿದ್ದೇನೆ. ನಾನು ಈ ಡಿಕ್ರಿಯ ಅಮಲ್ಜಾರಿಗೆ ಆಕ್ಷೇಪಣೆ ಇದೆ ಎಂದು ಆಕ್ಷೇಪಣಾ ಪತ್ರ ಸಲ್ಲಿಸಿದ್ದು, ಅದಕ್ಕೆ ಡಿಕ್ರಿದಾರರಾದ ಆಯಷಾ ಪರವಿನ್ ತಕರಾರು ಸಲ್ಲಿಸಿದ್ದು, ಅವರು ತಮ್ಮ ತಕರಾರಿನಲ್ಲಿ ಏನು ಬರೆಸಿದ್ದಾರೆ ಎಂದು ನನಗೆ ಗೊತ್ತಿದೆಯೇ? ಎಂದರೆ ನನಗೆ ಗೊತ್ತಿಲ್ಲ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**